ಒಪೀನಿಯನ್ ಕೊಟ್ಟಿದ್ದಾರೆಂದು ನಮಗೆ ಗೊತ್ತಾಗಬೇಕಲ್ಲಾ?

(ಗೊಂದಲ)

ಶ್ರೀ ಎಂ.ಸಿ.ನಾಣಯ್ಯ: ಅವರಿಗೆ ವರ್ಷಕ್ಕೆ 60 ಕೋಟಿ ರೂಪಾಯಿಗಳನ್ನು ಕೊಡುವುದಕ್ಕಾಗುವುದಿಲ್ಲ. ಎಲ್ಲಿಂದ ಹಣವನ್ನು ತರಬೇಕೆಂದು ಹೇಳಿ? ಕೆಲಸ ಮಾಡುತ್ತೇವೆಂದರೆ, ಅದು ಬೇಡ, ಹೈ ವೇ ಬೇಡ ಎಂದು ಹೇಳುತ್ತಾರೆ.

(ಈ ಸಂದರ್ಭದಲ್ಲಿ ಮಾನ್ಯ ಶ್ರೀ ವಾಟಾಳ್ ನಾಗರಾಜ್‌ರವರು ಮತ್ತು ಭಾರತೀಯ ಜನತಾ ಪಕ್ಷದ ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಸನ್ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಯಡಿಯೂರಪ್ಪನವರು ಸರ್ಕಾರದ ಮೇಲೆ ಆಪಾದನೆ ಮಾಡಿ ಹೊರಗಡೆ ಹೋಗಿರತಕ್ಕಂಥ ಈ ಸಂದರ್ಭದಲ್ಲಿ ಸರ್ಕಾರದ ಪರವಾಗಿ ಮಂತ್ರಿಮಂಡಲದ ಸದಸ್ಯರಾಗಿ ನಾವುಗಳು ಸುಮ್ಮನೆ ಇಲ್ಲಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಇದರಲ್ಲಿ 10 ಸಾವಿರ ಕೋಟಿ ರೂಪಾಯಿಗಳ ಅವ್ಯವಹಾರ ನಡೆದಿದೆ, ಲ್ಯಾಂಡ್ ಗ್ರಾಬಿಂಗ್ ಇದೆ, ಸರ್ಕಾರ ಏನೋ ಮಾಡುವುದಕ್ಕೆ ಹೊರಟಿದೆ, ಎಂದು ಅವರು ಬೇಜವಾಬ್ದಾರಿತನದಿಂದ ಕೊಟ್ಟಿರತಕ್ಕಂಥ ಹೇಳಿಕೆ ಇದಾಗಿದೆ. ಇವರುಗಳು ವಿದೇಶಕ್ಕೆ ಹೋಗಿಲ್ಲ. ಅಲ್ಲಿ ಏನು ನಡೆಯುತ್ತಿದೆ ಎಂಬುದು ಗೊತ್ತಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ವಿದೇಶಕ್ಕೆ ಹೋದರೆ ಮಾತ್ರ ಗೊತ್ತಾಗುತ್ತದೆಯೇ ಇಲ್ಲದೆ ಇದ್ದರೆ ಗೊತ್ತಾಗುವುದಿಲ್ಲವೇ?

ಶ್ರೀ ಪಿ.ಜಿ.ಆರ್.ಸಿಂಧ್ಯಾ: ನಾನು ಹೇಳುವುದನ್ನು ಕೇಳುವಷ್ಟಾದಾರೂ ಕನಿಷ್ಠ ಸೌಜನ್ಯವನ್ನು ಅವರು ತೋರಿಸಬೇಕು. ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ಚರ್ಚೆ ಮಾಡಿ ತೀರ್ಮಾನ ಮಾಡಲು ರಚಿಸಲಾಗಿದ್ದ ಸಂಪುಟದ ಉಪ ಸಮಿತಿಯಲ್ಲಿ ನಾನೂ ಒಬ್ಬ ಸದಸ್ಯನಾಗಿದ್ದೆ. ಆ ಸಮಿತಿಯು ಹಲವಾರು ತಿಂಗಳುಗಳಲ್ಲಿ ಹಣಕಾಸಿನ ಇಲಾಖೆ ಕಾರ್ಯದರ್ಶಿ, ಮುಖ್ಯ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಕಾರ್ಯದರ್ಶಿ ಯವರೊಡನೆ ಅನೇಕ ಸುತ್ತಿನ ಚರ್ಚೆ ನಡೆಸಿ ರಾಜ್ಯಕ್ಕೆ ಒಂದು ಒಳ್ಳೆಯ ಕೆಲಸ ಮಾಡಬೇಕೆನ್ನುವ ದೃಷ್ಟಿಯಿಂದ ಈ ಕೆಲಸ ಮಾಡಿದ್ದೇವೆ. ಅವರಿಗೆ, ಈ ಬಗ್ಗೆ ಏನು ಅಂಕಿಅಂಶಗಳು ಬೇಕೋ ಅವುಗಳೆಲ್ಲವನ್ನೂ ಸಹಿತ ನಾವು ಕೊಡುವುದಕ್ಕೆ ತಯಾರಿದ್ದೇವೆ. ಸಭಾಧ್ಯಕ್ಷರ ಕೊಠಡಿಯಲ್ಲಿ, ಇಂತಹ ವಿಷಯಗಳನ್ನು ಸಾಮಾನ್ಯವಾಗಿ ಮಾತನಾಡುವ ಸಂಪ್ರದಾಯದಿಂದ ಆ ರೀತಿ ಹೇಳಿದ್ದಾರೆಯೇ ಹೊರತು ಬೇರೆ ಉದ್ದೇಶದಿಂದ ಅಲ್ಲ. We want to be transparent. Any information you want, we are prepared to give and our